ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1218
ಸದಸ್ಯರ ಹೆಸರು : ಶ್ರೀ ಪಿ.ಆರ್. ರಮೇಶ್
(ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 22.09.2021
ಉತ್ತರಿಸುವ ಸಚಿವರು : ಕಂದಾಯ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
(ಅ)	ಮಂಡ್ಯ ಜಿಲ್ಲೆ, ನಾಗಮಂಗಲ ತಾಲೂಕು, ಹೊಣಕೆರೆ ಹೋಬಳಿಯ, ಮರಡಿಪುರ ಗ್ರಾಮ ಹಾಗೂ ಹೊಣಕೆರೆ ಹೋಬಳಿಯಲ್ಲಿರುವ ಮರಡಿಪುರ ಗ್ರಾಮದಲ್ಲಿರುವ ಶ್ರೀ ರಂಗನಾಥಸ್ವಾಮಿ ಬೆಟ್ಟ ಹಾಗೂ ಸುತ್ತಮುತ್ತಲಿನಲ್ಲಿ ಎಷ್ಟು ಎಕರೆ ಗೋಮಾಳ ಜಾಗವಿದೆ; (ಸಂಪೂರ್ಣ ಮಾಹಿತಿ ನೀಡುವುದು)	ಮಂಡ್ಯ ಜಿಲ್ಲೆ, ನಾಗಮಂಗಲ ತಾಲೂಕು, ಹೊಣಕೆರೆ ಹೋಬಳಿಯ, ಮರಡಿಪುರ ಗ್ರಾಮದಲ್ಲಿ ಶ್ರೀ ರಂಗನಾಥಸ್ವಾಮಿ ದೇವಾಲಯ ಇರುವುದಿಲ್ಲ. ಇಜ್ಜಲಘಟ್ಟ ಗ್ರಾಮದ ಸ.ನಂ.30ರಲ್ಲಿ ಶ್ರೀ ರಂಗನಾಥಸ್ವಾಮಿ ಬೆಟ್ಟ ಇರುತ್ತದೆ. ಆಕಾರ್ ಬಂದ್‌ನಂತೆ ಒಟ್ಟು 91-29 ಎಕರೆ ಗೋಮಾಳ ಜಮೀನಿರುತ್ತದೆ.
(ಆ)	ಶ್ರೀ ರಂಗನಾಥಸ್ವಾಮಿ ಬೆಟ್ಟಕ್ಕೆ ಸೇರಿರುವ ಗೋಮಾಳದಲ್ಲಿ ಕೆಲವು ರೈತರು ಕೃಷಿ ಹೊಂಡ ತೆಗೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ರೈತರ ವಿರುದ್ಧ ಸರ್ಕಾರವು ಯಾವ ಕ್ರಮ ಕೈಗೊಂಡಿದೆ; (ಸಂಪೂರ್ಣ ಮಾಹಿತಿ ನೀಡುವುದು)	ಬಂದಿದೆ. ಶ್ರೀ ರಂಗನಾಥಸ್ವಾಮಿ ಬೆಟ್ಟದ ಹತ್ತಿರ ಕೃಷಿಹೊಂಡವನ್ನು ಶೀಘ್ರವಾಗಿ ತೆರವುಗೊಳಿಸಲಾಗುವುದು.
(ಇ)	ಶ್ರೀ ರಂಗನಾಥಸ್ವಾಮಿ ದೇವಸ್ಥಾನವು ಪುರಾತನ ಕಾಲದ ದೇವಸ್ಥಾನವಾಗಿದ್ದು, ದೇವಸ್ಥಾನ ಪಕ್ಕದಲ್ಲಿಯೇ ಕೃಷಿ ಹೊಂಡ ತೆಗೆದಿರುವುದರಿಂದ, ದೇವಸ್ಥಾನಕ್ಕೆ ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ? (ಸಂಪೂರ್ಣ ಮಾಹಿತಿ ನೀಡುವುದು)	ಮಂಡ್ಯ ಜಿಲ್ಲೆ, ನಾಗಮಂಗಲ ತಾಲೂಕು, ಹೊಣಕೆರೆ ಹೋಬಳಿಯ, ಇಜ್ಜಲಘಟ್ಟ ಗ್ರಾಮದ ಶ್ರೀ ರಂಗನಾಥಸ್ವಾಮಿ ಬೆಟ್ಟಕ್ಕೂ ಕೃಷಿ ಹೊಂಡಕ್ಕೂ ನೂರು (100) ಮೀಟರ್ ದೂರವಿರುತ್ತದೆ. ಕೃಷಿಹೊಂಡ ತೆಗೆದಿರುವ ಜಾಗದಿಂದ ದೇವಸ್ಥಾನಕ್ಕೆ ಯಾವುದೇ ಹಾನಿಯಾಗಿರುವುದು ಕಂಡು ಬಂದಿರುವುದಿಲ್ಲ.

(ಕಡತ ಸಂಖ್ಯೆ:ಕಂಇ 44 ಎಲ್‌ಜಿಮ್ಮೆ 2021)

(ಆರ್.ಅಶೋಕ)
ಕಂದಾಯ ಸಚಿವರು